ರಾಜ್ಯದಲ್ಲಿ ನಿಗದಿಪಡಿಸುವುದಕ್ಕೆ ಕಾರಣವೇನು?

11.35 ಪಿ.ಎಂ

ಶ್ರೀ ಎನ್. ಹುಚ್ಚಮಾಸ್ತಿಗೌಡ: - ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಉತ್ತರ ಕೊಟ್ಟಪ್ರಕಾರ ಇದಲ್ಲದೆ ಬೇರೆ ಮಾರ್ಗ ಇಲ್ಲ. ರೈತರಿಗೆ ತೊಂದರೆಯಾಗುವುದಾಗಲೀ ವರ್ತಕರು ಕೊಡದಿರುವುದಾಗಲಿ...

ಶ್ರೀ ಬಿ.ರಾಜುಗೌಡ: ದರ ಏನು ? ಕೇಂದ್ರ ಕೃಷಿ ಖಾತೆ ರಸಗೊಬ್ಬರದ ಬೆಲೆಯನ್ನು ಇಂತಿಷ್ಟೇ ದರದಲ್ಲಿ ಮಾರಾಟ ಮಾಡಬೇಕೆಂದು ಇಷ್ಟೇ ನಿಗದಿ ಮಾಡಬೇಕೆಂದು ಒಂದು ಆದೇಶ ಹೊರಡಿಸಿದೆ. ತಾವು ರಾಜ್ಯಮಟ್ಟದಲ್ಲಿ ಅದನ್ನು ಮಾಡಿಲ್ಲ. ತಾವು ಹೆಚ್ಚಿನ ದರವನ್ನು ನಿಗದಿ ಮಾಡಿದ್ದೀರಿ ಇದಕ್ಕೆ ಕಾರಣವೇನು?

ಶ್ರೀ ಎನ್. ಹುಚ್ಚಮಾಸ್ತಿಗೌಡ: - ಮಾನ್ಯಅಧ್ಯಕ್ಷರೇ, ಮತ್ತೆ ಆ ಪ್ರಶ್ನೆಯನ್ನು ದಯಮಾಡಿ ಕೇಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎನ್.ಚಿಕ್ಕೇಗೌಡ: - ಮಾನ್ಯ ಅಧ್ಯಕ್ಷರೇ, ನಾನೂ ಸಹ ಪ್ರಶ್ನೆ ಕೇಳಲು ಒಂದು ಸಾರಿ ಎದ್ದು ನಿಂತುಕೊಂಡೆ ನನಗೆ ತಾವು ಅವಕಾಶ ಕೊಡಲಿಲ್ಲ.

ಅಧ್ಯಕ್ಷರು: - ಬೇಡ ಕುಳಿತುಕೊಳ್ಳಿ.

ಪ್ರಶ್ನೆ ನಂ. 122(93)

ವಿಷಯ: - ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸುವ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 122(93)

ಶ್ರೀ ಎ.ಟಿ. ರಾಮಸ್ವಾಮಿ(ಅರಕಲಗೂಡು)

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸುವ ವಿಷಯ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :

ಆ) ಭೂಮಾಪಕರುಗಳಿಲ್ಲದೆ ಸಕ್ರಮಗೊಳಿಸುವ ಕಾರ್ಯ ಕುಂಠಿತಗೊಂಡಿರುವುದು ನಿಜವೆ :

ಇ) ಹಾಗಿದ್ದಲ್ಲಿ ಸಕ್ರಮಗೊಳಿಸುವ ಕಾರ್ಯವನ್ನು ತ್ವರಿತಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು)

ಅ) ಹೌದು

ಆ) ಹೌದು

ಇ) ಸರ್ಕಾರವು ತಾಲ್ಲೂಕು ಮಟ್ಟದ ಸಮಿತಿಯ ಅಧ್ಯಕ್ಷರುಗಳಿಗೂ, ಕಂದಾಯ ಅಧಿಕಾರಿಗಳಿಗೂ ಕಾಲಾನುಕಾಲಕ್ಕೆ ಸುತ್ತೋಲೆಯನ್ನು ನೀಡಿ ಬಾಕಿ ಇರುವ ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು ತಿಳಿಸಿದೆ. ಪ್ರತಿ ತಿಂಗಳಿಗೂ ಗುರಿಯನ್ನು ಸಹ ನಿಗದಿಪಡಿಸಲಾಗಿದೆ. ಭೂಮಾಪನ ಮತ್ತು ಕಂದಾಯ ವ್ಯವಸ್ಥೆ ನಿರ್ದೇಶಕರಿಗೆ ಅಗತ್ಯವಿದ್ದ ತಾಲ್ಲೂಕುಗಳಿಗೆ ಮೋಜಣಿದಾರರನ್ನು ನೀಡುವಂತೆತಿಳಿಸಲಾಗಿದೆ. ಭೂಮಾಪನ ಮತ್ತು ಕಂದಾಯ ವ್ಯವಸ್ಥೆ ನಿರ್ದೇಶಕರು ಈಗ ಈ ಕೆಲಸಕ್ಕಾಗಿ ಮೋಜಣಿದಾರರನ್ನು ನಿಯೋಜಿಸುವ, ಸ್ಥಳಾಂತರಿಸುವ ಬಗ್ಗೆ ಕೆಲವು ಸಲಹೆಗಳನ್ನು ಸರ್ಕಾರಕ್ಕೆ

ಸಲ್ಲಿಸಿದ್ದು ಅವುಗಳು ಪರಿಶೀಲನೆಯಲ್ಲಿವೆ.

ಶ್ರೀ ಎ.ಟಿ. ರಾಮಸ್ವಾಮಿ: ಮಾನ್ಯ ಸಭಾಧ್ಯಕ್ಷರೇ, ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸುವ ಒಂದು ಕಾರ್ಯದಲ್ಲಿ ವಿಳಂಬವಾಗಿರುವುದು ನಿಜವೆಂದು ಸರ್ಕಾರದಿಂದ ಉತ್ತರ ಬಂದಿದೆ. ಬಡವರು ಏನು ಅಕ್ರಮ ಸಾಗುವಳಿ ಮಾಡಿದ್ದಾರೆ ಅದನ್ನು ಸಕ್ರಮಗೊಳಿಸುವುದಕ್ಕೆ ಸರ್ಕಾರದ ಒಂದು ಕಾಲಮಿತಿಯನ್ನು ಏನಾದರೂ ನಿಗದಿಪಡಿಸಿದೆಯೇ? ಕಾಲಮಿತಿಯನ್ನು ನಿಗದಿಪಡಿಸಿದ್ದರೆ ಏತಕ್ಕೆ ಬಡವರ ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸಲಿಕ್ಕೆ ಕಾಲಮಿತಿ ಕಾರ್ಯಕ್ರಮವನ್ನು ಹಾಕಿಕೊಂಡಿರುವುದಿಲ್ಲ ಎಂಬುದರ ಬಗ್ಗೆ ಸರ್ಕಾರ ಉತ್ತರ ಹೇಳಬೇಕು. ಮತ್ತೆ ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸತಕ್ಕ ಕೆಲಸದಲ್ಲಿ ವಿಳಂಬವಾದಷ್ಟೂ ಅಕ್ರಮಗಳು ಜಾಸ್ತಿಯಾಗುತ್ತವೆ. ಇದರಿಂದ ಬಡವರಿಗೆ ಅನ್ಯಾಯವಾಗುತ್ತದೆ. ಸಮಸ್ಯೆಗಳು ಜಾಸ್ತಿಯಾಗುತ್ತವೆ. ಅದನ್ನು ಸರಿಪಡಿಸುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ?

ಶ್ರೀ ಎಂ. ರಾಜಶೇಖರಮೂರ್ತಿ: ಮಾನ್ಯ ಅಧ್ಯಕ್ಷರೆ, ಎರಡೂ ಪ್ರಶ್ನೆಗಳಿಗೆ ಒಂದೇ ಉತ್ತರ ಹೇಳಬೇಕೆಂದರೆ. ಕಾನೂನಿನ ತೊಂದರೆಯಿಂದ ಇದು ವಿಳಂಬವಾಗಿದೆ. ಏಕೆಂದರೆ ಲ್ಯಾಂಡ್‌ರೆವಿನ್ಯೂ ರೂಲ್ಸ್ ಪ್ರಕಾರ ಕೆಲವು ವರ್ಗದ ಜಮೀನುಗಳನ್ನು ನಾವು ಸಕ್ರಮಗೊಳಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆ ರೂಲನ್ನು ನಾನು ಓದುತ್ತೇನೆ, ಅದು ಈ ರೀತಿ ಇದೆ:

" Lands assigned for special purposes under Sec.71 of the Act and lands described in revenue records as Devarakadu, Uruduve, Gunduphop, tankbed, foodcrop, Karaabhalla, gate reserve, burial grounds and such land which, in the opinion of the Government is required for purposes, shall not be granted."

ಶ್ರೀ ಡಿ.ಬಿ. ಚಂದ್ರೇಗೌಡ: ಇದೆಲ್ಲವನ್ನೂ ಬಿಟ್ಟರೆ ಕೊಡುವುದಕ್ಕೆ ಉಳಿಯುವುದು ಯಾವುದು?

ಶ್ರೀ ಎಂ. ರಾಜಶೇಖರಮೂರ್ತಿ: ಅವುಗಳನ್ನು ಬಿಟ್ಟು ಯಾವುದು ಉಳಿಯುತ್ತದೆ ಅದು ಮೊದಲನೆಯದು ಕಾನೂನಿನ ತೊಡಕು. ಎರಡನೆಯದು, eligibility of the person who has applied for regularisation. ಅದಕ್ಕೆ ಕೆಲವು ನಿಯಮಗಳಿವೆ. ಆ ನಿಯಮಗಳಿಗೆ ಒಳಪಟ್ಟು ಮಾಡಬೇಕು. ಮೂರನೆಯದು ಸರ್ವೇಯರ್ಸ್ ಅಭಾವವಿದೆ. ನಮ್ಮಲ್ಲಿ 1390 ಜನ ಸರ್ವೇಯರ್ಸ್ ಇದ್ದಾರೆ. ಸರ್ವೇಯರ್ಸ್ ಅಭಾವವಿರುವುದರಿಂದ ಎಲ್ಲರೂ ಏಕ ಕಾಲದಲ್ಲಿ ನಮಗೆ ಸರ್ವೇಯರ್ಸ್ ಬೇಕೆಂದು ಕೇಳುವುದರಿಂದ ನಮಗೆ ಕೊಡಲಿಕ್ಕೆ ಸಾಧ್ಯವಾಗಿಲ್ಲ. ನಮಗೆ ಸರ್ವೇಯರ್ಸ್ ತೊಂದರೆಯಿದೆ. ಬಾಂದ್ ನೆಡತಕ್ಕವರು ಚೈನು ಹಿಡಿದುಕೊಳ್ಳುವವರು ಇಲ್ಲ. ಶಾಸಕರು ಆದಕ್ಕೆ ಛೇರ್ಮನ್. ಅನೇಕಸಾರಿ ಶಾಸಕರು ಬೆಂಗಳೂರಿಗೆ ಬರುತ್ತಾರೆ, ಈ ಸದನ ನಡೆಯುವಾಗ ಬಂದರೆ ಸುಮಾರು 3 ತಿಂಗಳು ಬೆಂಗಳೂರಿನಲ್ಲಿಯೇ ಇರಬೇಕಾಗುತ್ತದೆ. ಆ ಕಾಲದಲ್ಲಿ ಏನೂ ಮಾಡುವುದಕ್ಕಾಗುವುದಿಲ್ಲ. ಇದು ಒಂದು ಕಾರಣ. ಈ ಎಲ್ಲಾ ಕಾರಣಗಳಿಂದ ಸ್ವಲ್ಪ ಮಟ್ಟಿಗೆ ನಿಧಾನವಾಗುತ್ತಿದೆ. ಯಾವುದನ್ನು ಸರಿಪಡಿಸಬಹುದು; ಯಾವುದನ್ನು ಸರಿಪಡಿಸುವುದಕ್ಕಾಗುವುದಿಲ್ಲ ಎನ್ನುವುದು ಮುಖ್ಯ. ಕಾನೂನಿನಲ್ಲಿರುವುದನ್ನು ನಾವು ಸರಿಪಡಿಸುವುದಕ್ಕಾಗುವುದಿಲ್ಲ. ನೀವೆಲ್ಲಾ ಪ್ರಯತ್ನಪಟ್ಟು ಕಾನೂನಿಗೆ

ಅಮೆಂಡ್‌ಮೆಂಟ್ ಮಾಡುವುದಾದರೆ ನನ್ನದೇನೂ ಅಬ್ಜಕ್ಷನ್ ಇಲ್ಲ. ಸರ್ವೇಯರ್ಸ್ ನೇಮಕ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಈಗಾಗಲೇ ಕೆಲವರನ್ನು ನೇಮಕ ಮಾಡುವುದಕ್ಕೆ ಪ್ರಯತ್ನಪಟ್ಟಿದ್ದೇವೆ. ಸರ್ವೇಯರ್ಸ್ ನೇಮಕ ಮಾಡಿಕೊಂಡಿದ್ದು, ನಂತರ ಕೋರ್ಟ್‌ನಲ್ಲಿ ಅದನ್ನು ಸೆಟ್ಟಸೈಡ್ ಮಾಡಿದರು. ಮತ್ತೆ ಅಪ್ಲಿಕೇಷನ್ಸ್ ಕರೆದು ಸರ್ವೇಯರ್ಸ್ ನೇಮಕ ಮಾಡುತ್ತಿದ್ದೇವೆ. ಸುಮಾರು 15-20 ದಿವಸಗಳಲ್ಲಿ ಈ ಕಾರ್ಯ ಮುಗಿಯಬಹುದು. ಇಂಟರ್‌ವ್ಯೂ ಆಗಿದೆ. ಆ ಕಾರ್ಯ ಮುಗಿಯುತ್ತದೆ. ಪೋಡಿ ವರ್ಕ್ಸ್‌ನಲ್ಲಿ ಸರ್ವೇಯರ್ಸ್ ಇದ್ದಾರೆ. ಅವರನ್ನು ಈ ಕೆಲಸಕ್ಕೆ ಸ್ಪೆಷಲ್ ಆಗಿ ಡ್ರಾ ಮಾಡಿಕೊಳ್ಳಬೇಕೆಂದು ಹೇಳಿದ್ದೇನೆ. ಅದರ ಬಗ್ಗೆ ಪ್ರಪೋಸಲ್ ಬಂದಿದೆ ಅದಕ್ಕೆ ನಾವು ಒಪ್ಪಿಗೆ ಕೊಟ್ಟಿದ್ದೇವೆ. ಶಾಸಕರೇ ಇದಕ್ಕೆ ಛೇರ್ಮನ್ ಆಗಿರುವುದರಿಂದ ನಾನು ಅವರಿಗೆ ಆರ್ಡ್ಯೆಸ್ ಮಾಡುವ ಪರಿಸ್ಥಿತಿಯಲ್ಲಿಲ್ಲ. ಅವರೇ ತಿಳಿದುಕೊಂಡು ಆದಷ್ಟು ಜಾಗ್ರತೆ ಆ ಕೆಲಸವನ್ನು ಮುಗಿಸಬೇಕು. ಒಂದು ಇನ್‌ಸ್ಟ್ರಕ್ಷನ್ ಏನು ಹೋಗಿದೆ ಎಂದರೆ ಒಂದು ತಿಂಗಳಿಗೆ 4 ಮೀಟಿಂಗ್ ಮಾಡಬೇಕು ಎಂದು ಹಾಗೂ ಒಂದು ಮೀಟಿಂಗ್‌ನಲ್ಲಿ 25 ಅರ್ಜಿಗಳನ್ನು ವಿಲೇವಾರಿ ಮಾಡಬೇಕೆಂದು ಹೇಳಿದ್ದೇವೆ. ಆ ಪ್ರಕಾರ ಒಂದು ತಿಂಗಳಿಗೆ ನೂರು ಅರ್ಜಿ ವಿಲೇವಾರಿ ಮಾಡಬೇಕೆಂದು ಸುತ್ತೋಲೆ ಕಳುಹಿಸಿದ್ದೇವೆ. ಅವರು ಅದನ್ನು ಗಮನದಲ್ಲಿಟ್ಟುಕೊಂಡು ಆದಷ್ಟು ಜಾಗ್ರತೆ ಮುಗಿಸಿದರೆ ಕೆಲಸ ಸುಲಲಿತವಾಗುತ್ತದೆ. ಈ ಸಮಸ್ಯೆ ಪರಿಹಾರವಾಗುತ್ತದೆ.

ಶ್ರೀ ಎ.ಟಿ. ರಾಮಸ್ವಾಮಿ: ನನ್ನ ಪ್ರಶ್ನೆಗೆ ಸ್ಪಷ್ಟವಾದ ಉತ್ತರ ಬರಲಿಲ್ಲ. ಕೆಲವು ವರ್ಗದ ಭೂಮಿಯನ್ನು ವಿತರಣೆ ಮಾಡುವುದಕ್ಕೆ ಬರುವುದಿಲ್ಲ. ಅದಕ್ಕೆ ಕಾನೂನು ತೊಡಕು ಇದೆ. ಅದನ್ನು ನಿವಾರಣೆ ಮಾಡಿಕೊಂಡು ಮಾಡಿ. ಯಾವುದು ವಿತರಣೆ ಮಾಡುವುದಕ್ಕೆ ಬರುತ್ತದೆ ಆ ಭೂಮಿಯನ್ನು ನೀವೇನು ಕಾಲಮಿತಿ ಹಾಕಿಕೊಂಡಿದ್ದೀರಲ್ಲಾ, ಆ ಕಾಲಮಿತಿಯಲ್ಲಿ ಏತಕ್ಕೆ ಮಾಡಿಲ್ಲವೆಂಬುದು ನನ್ನ ಪ್ರಶ್ನೆ. ಈಗ ಕಾಲಮಿತಿ ಹಾಕಿಕೊಂಡು ಇಷ್ಟೇ ದಿನದಲ್ಲಿ ವಿತರಣೆ ಮಾಡಬೇಕೆಂದು, ಒಡವರ ಭೂಮಿಯನ್ನು ಸಕ್ರಮಗೊಳಿಸುವುದಕ್ಕೆ ಸರ್ಕಾರ ಆಲೋಚನೆ ಮಾಡುತ್ತದೆಯೇ? ಎಷ್ಟು ದಿನದಲ್ಲಿ ಮಾಡುತ್ತೀರೆಂದು ಹೇಳಿ. ತಿಂಗಳಿಗೆ 4 ಮೀಟಿಂಗ್ ಮಾಡಬೇಕೆಂದು ಹೇಳುತ್ತೀರಿ; ನೂರು ಅರ್ಜಿ ವಿಲೇವಾರಿ ಮಾಡಬೇಕೆಂದು ಹೇಳುತ್ತೀರಿ. ಮೋಜಿಣಿದಾರರು ಇಲ್ಲದೆ, ಸರ್ವೆ ಆಗದೆ ಅರ್ಜಿ ವಿಲೇವಾರಿ ಹೇಗೆ ಮಾಡುತ್ತೀರಿ? ಮೋಜಿಣಿದಾರರನ್ನು ಎಷ್ಟು ದಿನದಲ್ಲಿ ಒದಗಿಸುತ್ತೀರಿ? ಭೂಮಿಯನ್ನು ಸಕ್ರಮಗೊಳಿಸುವ ಕಾರ್ಯವನ್ನು ಎಷ್ಟು ದಿನದಲ್ಲಿ ಪೂರ್ಣಗೊಳಿಸುತ್ತೀರಿ? ಅದಕ್ಕೆ ಕಾಲಮಿತಿ ಹಾಕಿಕೊಳ್ಳುತ್ತೀರಾ?

ಶ್ರೀ ಎಂ. ರಾಜಶೇಖರ ಮೂರ್ತಿ– ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಹೇಳಿದ್ದೇನೆ. ಕಾಲಮಿತಿ ಬಗ್ಗೆ ಅವರು ಹೇಳುತ್ತಾರೆ. ಕಾಲಮಿತಿಯನ್ನು ಒಂದು ಸಾರಿ ಹಾಕಿ ನೋಡಿದೆವು. ಆಗಸ್ಟ್ 15ರೊಳಗೆ ಮಾಡಿ ಮುಗಿಸಬೇಕೆಂದು ಹೇಳಿದೆವು. ಮಾಡಿ ಮುಗಿಸತಕ್ಕವರು ನೀವೇ. ಏಕೆಂದರೆ ನೀವೇ ಛೇರ್ಮನ್ನರಾಗಿದ್ದೀರಿ. ಇನ್ನೊಂದು ಸಾರಿ ಕಾಲಮಿತಿ ಹಾಕಿದರೂ ಅದೇ ಸಮಸ್ಯೆ. ಅದೇನೂ ವರ್ಕ್ ಆಗುವುದಿಲ್ಲ.

ಶ್ರೀ ಎ.ಟಿ. ರಾಮಸ್ವಾಮಿ:– ಇದು ಬಹಳ ಪ್ರಮುಖವಾದ ಪ್ರಶ್ನೆ. ಕಾಲಮಿತಿ ಹಾಕಿದ್ದಾರೆ. ಆದರೆ ಮೋಜಿಣಿದಾರರು ಇಲ್ಲದೆ ಹೇಗೆ ಕಾಲಮಿತಿ ಹಾಕುತ್ತೀರಿ? ಇದರಿಂದ ಹೇಗೆ ಕೆಲಸವನ್ನು ಪೂರ್ಣಗೊಳಿಸುವುದಕ್ಕೆ ಸಾಧ್ಯ? ಎಷ್ಟು ದಿನಗಳಲ್ಲಿ ಮೋಜಿಣಿದಾರರನ್ನು ಕೊಡುತ್ತೀರಿ? ನೀವು ಸರ್ವೆ

ಮಾಡಿಸಿಕೊಡಿ; ನಾವು ಕೆಲಸ ಪೂರ್ಣ ಮಾಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ:- ಆ ಸಮಿತಿ ಕೆಲಸ ಮಾಡಲಿಲ್ಲವೆಂಬ ಕಾರಣದಿಂದ ನಿಧಾನವಾಗಿದೆ ಎಂದು ಹೇಳುವುದು ಸರಿಯಾದ ಮಾತಲ್ಲ. ಸಮಿತಿಯವರು ತೀರ್ಮಾನ ಮಾಡಬೇಕಾದರೆ ಸರ್ವೆ ಮಾಡದೆ, ಸರ್ವೆ ಕೆಲಸ ಆಗದೆ ಏನೂ ಮಾಡುವುದಕ್ಕೆ ಬರುವುದಿಲ್ಲ. ಹಾಗಾಗಿ ನಾವು ಸಭೆಗಳನ್ನು ಕರೆದರೂ ರೆಕಾರ್ಡ್ ಬಿಲ್ಡ್ ಅಪ್ ಆಗಿ ಬರುವುದಿಲ್ಲ. ಆದಕ್ಕೋಸ್ಕರ ಮೀಟಿಂಗ್ ಸೇರಿ ತೀರ್ಮಾನ ಮಾಡುವುದಕ್ಕೆ ಆಗದೆ ವಾಪಸ್ಸು ಹೋಗುತ್ತಿದೆ. ಆದುದರಿಂದ ದಯವಿಟ್ಟು ಸರ್ವೇಯರನ್ನು ನೇಮಕ ಮಾಡಿ. ಹಿಂದೆ ದರಖಾಸ್ತುಗಳನ್ನು ಮಂಜೂರ್ಮಾಡತಕ್ಕ ಕಾಲದಲ್ಲಿ ರೆವಿನ್ಯೂ ಇನ್ಸ್‌ಪೆಕ್ಟರ್ ರೆಕಾರ್ಡ್ ಬಿಲ್ಡ್ ಅಪ್ ಮಾಡಿ ಅದರ ಆಧಾರದ ಮೇಲೆ ಮಂಜೂರ್ಮಾಡತಕ್ಕ ಕ್ರಮ ಇತ್ತು. ತದನಂತರ ದರಖಾಸ್ತು ಸಾಗುವಳಿ ಚೀಟಿ ಕೊಟ್ಟ ಮೇಲೆ ಇವತ್ತು ಅದಕ್ಕೆ ಪಕ್ಕಾ ಪೋಡಿ ಮಾಡತಕ್ಕ ಕಾಲದಲ್ಲಿ ಸರ್ವೇಯರನ್ನು ಉಪಯೋಗ ಮಾಡುತ್ತಿದ್ದೀರಿ. ಇದು ಸಣ್ಣ ಪ್ರಶ್ನೆ ಅಲ್ಲ. ಇಡೀ ರಾಜ್ಯದಲ್ಲಿ 22 ಲಕ್ಷ ಅರ್ಜಿಗಳು ಪೆಂಡಿಂಗ್ ಇವೆ. ಲೆಕ್ಕ ತೆಗೆದು ನೋಡಿದರೆ ಇವತ್ತಿನವರೆಗೆ 5 ಸಾವಿರ ಅರ್ಜಿಗಳು ಸಹ ವಿಲೇವಾರಿಯಾಗಲಿಲ್ಲ. ಆದುದರಿಂದ ಮೊದಲನೇ ಹಂತದಲ್ಲಿ ಸರ್ವೇಯರನ್ನು ಒಳಪಡಿಸಿಕೊಂಡು ಸರ್ವೆ ಕೆಲಸ ಮಾಡಿಸಿ ತೀರ್ಮಾನ ಮಾಡುವ ಕ್ರಮವನ್ನು ಬದಲಾವಣೆ ಮಾಡಿ ಮೊದಲು ತೀರ್ಮಾನ ಮಾಡಿ. ಇವತ್ತು ಸಾಗುವಳಿ ಚೀಟಿ ಕೊಡೋಣ. ಆ ಮೇಲೆ ಪಕ್ಕಾ ಪೋಡಿ ಮಾಡಿ ಅವರು ದುರಸ್ತು ಮಾಡಿಕೊಡಲಿ. ಆ ಕ್ರಮದಲ್ಲಿ ಮಾಡಿದರೆ ಅಷ್ಟೂ ಅರ್ಜಿಗಳನ್ನು ನಾವು ಕಾಲಮಿತಿಯಲ್ಲಿ ತೀರ್ಮಾನ ಮಾಡಬಹುದೇ ಹೊರತು, ಹೊಸ ಸರ್ವೇಯರ್ಸನ್ನು ಹಾಕಿದರೂ ನೀವು ಹೇಳಿದ ರೀತಿಯಲ್ಲಿ, ಕಾಲಮಿತಿಯಲ್ಲಿ ತೀರ್ಮಾನ ಮಾಡುವುದಕ್ಕೆ ಖಂಡಿತ ಆಗುವುದಿಲ್ಲ. ಆದ್ದರಿಂದ ನಿಯಮಾವಳಿಯನ್ನು ಸ್ವಲ್ಪ ಬದಲಾವಣೆ ಮಾಡುವ ಕೆಲಸ ಮಾಡುತ್ತೀರಾ?

ಶ್ರೀ ಎಂ. ರಾಜಶೇಖರಮೂರ್ತಿ- ನಾನು ಮೊದಲೇ ಹೇಳಿದೆ, ಸರ್ವೇಯರನ್ನು ನೇಮಿಸಿಕೊಳ್ಳಬೇಕು ಎಂದು. ಸರ್ಕಾರ ಕ್ರಮ ತೆಗೆದುಕೊಂಡು 1300 ಜನ ಸರ್ವೇಯರ್‌ಗಳನ್ನು ನೇಮಕ ಮಾಡಿದೆವು. ಆದರೆ ಕೋರ್ಟಿನಲ್ಲಿ ಅದು ಸರಿಯಾಗಿ ಆಗಲಿಲ್ಲವೆಂದು ಸೆಟ್ ಆಸೈಡ್ ಮಾಡಿದರು. ಈಗ ಮತ್ತೆ ಹೊಸದಾಗಿ ಐಟಿಐ. ಟ್ರೈನಿಂಗ್ ಆಗಿರುವವರಿಂದ ಅರ್ಜಿಗಳನ್ನು ಕರೆದು ರೆಕ್ರೂಟ್‌ಮೆಂಟ್ ಮಾಡುತ್ತಿದ್ದೇವೆ . ಹೊಸದಾಗಿ ನೇಮಕ ಮಾಡಿಕೊಳ್ಳುವವರಿಗೆ ಈ ಕಷ್ಟ ಇರುತ್ತದೆ. ಅಲ್ಲಿಯವರೆಗೆ ತಾವು ಸ್ವಲ್ಪ ತಡೆದುಕೊಳ್ಳಬೇಕು.

ಶ್ರೀ ಡಿ.ಬಿ.ಚಂದ್ರೇಗೌಡ: ಅರ್ಜಿಗಳನ್ನು ತಾವು ಹೇಳಿದ ಹಾಗೆ ನಾವು ಶಾಸಕರು ಕುಳಿತು ವಿಲೇವಾರಿ ಮಾಡುತ್ತಿದ್ದೇವೆ. ದಯವಿಟ್ಟು ಸಂಬಂಧಪಟ್ಟ ಇಲಾಖೆಯವರಿಗೆ ಹೇಳಿ, ಯಾವ ಯಾವ ಅರ್ಜಿಗಳು ಇಂಥ ರಿಸರ್ವೇಷನ್ ಕೆಟಗರಿಯಲ್ಲಿ ಬಂದಿವೆ ಎಂಬ ಮಾಹಿತಿಯನ್ನು ಪಡೆದುಕೊಳ್ಳಬೇಕು. ಅಧಿಕಾರಿಗಳ ಮಟ್ಟದಲ್ಲಿ ಅವನ್ನು ಸ್ಕ್ರೂಟಿನಿ ಮಾಡಿ ವಜಾ ಮಾಡಿದರೆ ಅಲ್ಲಿ ಎಷ್ಟು ಅರ್ಜಿಗಳು ಬರುತ್ತವೆ ಅವನ್ನು ಒಂದು ತಿಂಗಳಲ್ಲಿ ಮುಗಿಸಿಕೊಡುತ್ತೇವೆ. ಆದುದರಿಂದ ನೀವು ಏನು ಕೆಟಗರಿ ಮಾಡಿದ್ದೀರಿ, ಮಲೆನಾಡಿನಲ್ಲಿ ಮೈನರ್ ಫಾರೆಸ್ಟ್, ಮೇಜರ್ ಫಾರೆಸ್ಟ್ ಏನೇನೋ ಫಾರೆಸ್ಟ್ ಎಂದು ಹಾಕಿರುವುದರಿಂದ ಒಂದು ಅರ್ಜಿಯನ್ನೂ ವಿತರಣೆ ಮಾಡುವುದಕ್ಕೆ ಆಗುವುದಿಲ್ಲ. ಕಾಗೋಡು ತಿಮ್ಮಪ್ಪನವರದ್ದು ಬಹಳ ವ್ಯಾಲಿಡ್ ಸಲಹೆ. ನೀವು ಎಷ್ಟು ಮಾಡಿದರೂ ಬೌಂಡರೀಸ್ ಫಿಕ್ಸ್ ಮಾಡದಿದ್ದರೆ ನಾವು ಏನು ಮಾಡಿದರೂ ವ್ಯರ್ಥವಾಗುತ್ತದೆ.

ಮಾನ್ಯಮಂತ್ರಿಗಳು ಆಕ್ಟೋಬರ್ 2ನೇ ತಾರೀಖು ಎಂದು ಕಾಲಮಿತಿಯನ್ನು ಹಾಕಿದ್ದರು. ಆದುದರಿಂದ, ದಯಮಾಡಿ ಸರ್ಕಾರವೇ ತೀರ್ಮಾನ ಮಾಡಲಿ. ಆ ಹೊರೆಯನ್ನು ನಮ್ಮ ಮೇಲೆ ಹಾಕಿ, ಆಪಾದನೆ ಕಟ್ಟಿ, ನಮ್ಮ ಮೇಲೆ ಹಣೆಪಟ್ಟಿಯನ್ನು ಕಟ್ಟುವ ಪ್ರಯತ್ನ ಮಾಡಬೇಡಿ. ಇದು ನಿಮ್ಮ ವಿಫಲತೆ.

ಶ್ರೀ ಎಂ. ರಾಜಶೇಖರಮೂರ್ತಿ :- ಮಾನ್ಯ ಸದಸ್ಯರು, ಯಾರ ಯಾರ ಅಪ್ಲಿಕೇಷನ್ ಎಲಿಜಿಬಲ್ ಅಲ್ಲ, ಅದನ್ನು ಮೊದಲೇ ಅಧಿಕಾರಿಗಳು ಒಂದು ಪಟ್ಟಿ ಮಾಡಿದರೆ ಬಹಳ ಸುಲಭವಾಗುತ್ತದೆ ಮತ್ತು ತೀರ್ಮಾನ ಮಾಡಬಹುದೆಂದು ಹೇಳಿದರು. ಇದನ್ನು ಯೋಚನೆ ಮಾಡಿ ಲಾ ಡಿಪಾರ್ಟ್‌ಮೆಂಟ್‌ನಲ್ಲಿ ಎಕ್ಸಾಮಿನ್ ಮಾಡಿಸಿದೆ. ಅವರು ಈ ವಿಚಾರ ತೀರ್ಮಾನ ಮಾಡುವಾಗ, there cannot be dual authority ಎಂದು ಹೇಳಿದರು. ಒಂದು ಅಧಿಕಾರಿಗಳು ರಿಜೆಕ್ಟ್ ಮಾಡುವಂತಾದ್ದು, ಮತ್ತೊಂದು ಕಮಿಟಿ ಮುಂದೆ ಬಂದಮೇಲೆ ಗ್ರಾಂಟ್ ಮಾಡುವಂತಾದ್ದು. ಇದು ಸಮಂಜಸ ಆಗುವುದಿಲ್ಲ. ಇದು ಕಾನೂನಿನಲ್ಲಿ ಸರಿಹೋಗುವುದಿಲ್ಲ. ಅದರಂತೆ ಮಾಡಬೇಡಿ ಎಂದು ಕಾನೂನು ಇಲಾಖೆಯಿಂದ ಆಡ್ವೈಸ್ ಬಂದಿದೆ.

ಶ್ರೀ ಹೆಚ್. ಏಕಾಂತಯ್ಯ :- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಮಂತ್ರಿಗಳು ಎರಡು ಗಡುವನ್ನು ಕೊಟ್ಟಿದ್ದರು. ಮೊದಲನೆಯದು ಆಗಸ್ಟ್ 15ನೇ ತಾರೀಖಿನೊಳಗೆ ಹಂಚಬೇಕೆಂದು ಹೇಳಿದರು; ನಂತರ ಆಕ್ಟೋಬರ್ 2ರೊಳಗೆ ಹಂಚಿ ಎಂಬ ಮಾತನ್ನು ಹೇಳಿದ್ದಾರ. ನಮ್ಮ ತಾಲ್ಲೂಕಿಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ, ಕೊಟ್ಟಿರತಕ್ಕ ಎಲ್ಲಾ ಅರ್ಜಿಗಳನ್ನೂ ವಿಲೇವಾರಿ ಮಾಡಿದ್ದೇವೆ. ತಾವೇನು ಹೇಳಿದಿರಿ, ತಮ್ಮ ಕಾನೂನಿನ ಪ್ರಕಾರ ಅದನ್ನು ಮಾಡಿದ್ದೇವೆ. ಆದರೆ, ಇವತ್ತಿನ ದಿವಸ ಸರ್ವೇಯರ್ ಯಾರೂ ಇಲ್ಲ. ಅವರು ಅಳತೆ ಮಾಡಿ ಕೊಡದೇ ಇರುವುದರಿಂದ, ನಾವೇನೂ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ, ಸಮಿತಿ ಮುಂದೆ ಇಡುವುದಕ್ಕೂ ಸಾಧ್ಯವಿಲ್ಲ. ಯಾವರೀತಿ ವಿಲೇವಾರಿ ಮಾಡಿದ್ದೇವೆಂದರೆ, ಸ್ಥಳಕ್ಕೆ ಹೋಗಿ, ಪರಿಶೀಲನೆ ಮಾಡಿ, ಅಳತೆ ಮಾಡಿ ಎಂದು ಹೇಳಿದ್ದೇವೆ. ಅಳತೆ ಮಾಡುವವರೇ ಇಲ್ಲದಿದ್ದರೆ ನಾವು ಪಟ್ಟಾ ಯಾರಿಗೆ ಕೊಡಬೇಕು. ಇದು ಒಂದು ಪ್ರಶ್ನೆ. ಮತ್ತೊಂದು ಪ್ರಶ್ನೆಯನ್ನು ಹೇಳಿದಿರಿ. ತೋಪು, ಕೆರೆ ಅಂಗಳ ಇಂಥಾದ್ದಕ್ಕೆ ಯಾರಿಗೂ ಕೊಡಬಾರದು ಎಂದು. ಅದನ್ನೂ ವಜಾ ಮಾಡಿದ್ದೇವೆ. ನಾನು ಈ ಸಮಯದಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಅನೇಕ ಸಂದರ್ಭಗಳಲ್ಲಿ ಎಕ್ಸ್‌ಸ್ ಖರಾಬು ಎಂದು ಏನು ವರ್ಗೀಕರಣ ಮಾಡಿದ್ದೀರಿ, ಫಾರೆಸ್ಟ್ ಲ್ಯಾಂಡ್ ಎಂದು ಏನು ವರ್ಗೀಕರಣ ಮಾಡಿದ್ದೀರಿ, ಅಲ್ಲಿ ಹೋಗಿ ನೋಡಿದರೆ, ಎಕ್ಸ್‌ಸೂ ಇಲ್ಲ, ಫಾರೆಸ್ಟೂ ಇಲ್ಲ. ಈಗಲೂ ಅಲ್ಲಿ ಅತಿಕ್ರಮ ಮಾಡಿ, ಬಗರ್ ಹುಕುಂ ಸಾಗುವಳಿ ಮಾಡಿದ್ದಾರೆ, ಅಂತಹವರ ಬಗ್ಗೆ ತಾವೇನು ಮಾಡುತ್ತೀರಿ? ಅದಕ್ಕಾಗಿ ಇಲ್ಲೇನು ಸಾಗುವಳಿ ಮಾಡುತ್ತಿದ್ದಾರೆ, ಅದನ್ನು ಪುನರ್ ಪರಿಶೀಲನೆ ಮಾಡಿ, ಆ ವರ್ಗೀಕರಣ ತಪ್ಪಿಸಿ, ಬಡವರು ಯಾರು ಮಾಡಿದ್ದಾರೆ, ಅವರಿಗೇ ಕೊಡುವಂಥ ರೀತಿಯಲ್ಲಿ ವಿನಾದರೂ ಸೂಚನೆ ಕೊಡುತ್ತೀರಾ? ಮತ್ತು ನಮಗೆ ಬೇಕಾದ ಸರ್ವೇಯರ್‌ನ್ನು ಕೊಡದೇ ಇರುವುದರಿಂದ ಇದೆಲ್ಲಾ ಆಗಿದೆ. ಇದಕ್ಕೆ ತಾವೇನು ಮಾಡುತ್ತೀರಿ ಎಂಬುದನ್ನು ಹೇಳಬೇಕು.

ಶ್ರೀ ಎಂ. ರಾಜಶೇಖರಮೂರ್ತಿ :- ಎಕ್ಸ್‌ಸ್ ಲ್ಯಾಂಡ್, ಟ್ಯಾಂಕ್‌ಬೆಡ್‌ಲ್ಯಾಂಡ್, ಫಾರೆಸ್ಟ್ ಲ್ಯಾಂಡ್, ಇವುಗಳನ್ನೆಲ್ಲಾ ಏನು ಮಾಡುತ್ತೀರಿ ಎಂದು ಕೇಳುತ್ತಿದ್ದೀರಿ.

ಶ್ರೀ ಹೆಚ್. ಏಕಾಂತಯ್ಯ : – ಎಕ್ಸೈಸ್ ಲ್ಯಾಂಡನ್ನು ಬಗರ್ ಹುಕುಂ ಸಾಗುವಳಿ ಮಾಡಿದ್ದಾರೆ. ಅಲ್ಲಿ ಎಕ್ಸೈಸೂ ಇಲ್ಲ, ಫಾರೆಸ್ಟೂ ಇಲ್ಲ. ಬಗರ್ ಹುಕುಂ ಸಾಗುವಳಿ ಮಾಡಿದ್ದಾರೆ. ಇದನ್ನು ಬಡವರಿಗೆ ಕೊಡುವುದಕ್ಕೆ ಏನು ತೊಂದರೆ ಇದೆ?

ಶ್ರೀ ಎಂ. ರಾಜಶೇಖರಮೂರ್ತಿ : – ಈ ವರ್ಗದ ಲ್ಯಾಂಡ್ ಏನಿದೆ, ಇದನ್ನು ನಿಷೇಧ ಮಾಡಿ ಇದನ್ನು ಕಾನೂನು ಪ್ರಕಾರ ಕೊಡಬಾರದು ಎಂದು ನೀವು ಸಲಹೆ ಕೊಟ್ಟಿದ್ದೀರಿ. ಆದರೆ ಇದನ್ನು ಇಂಪ್ಲಿಮೆಂಟ್ ಮಾಡಬೇಕೆಂದು ಹೋದಾಗ, ರೂಲ್ ಮತ್ತು ಆಕ್ಟ್ ಎರಡೂ ಅಡ್ಡ ಬರುತ್ತವೆ. ಆದ್ದರಿಂದ ಈ ರೂಲ್ ಮತ್ತು ಆಕ್ಟ್ ಎರಡನ್ನೂ ತಿದ್ದುಪಡಿ ಮಾಡಿ, ತಮ್ಮ ಮುಂದೆ ಬರಬೇಕಾಗುತ್ತದೆ, ನೀವು ಸಲಹೆ ಕೊಟ್ಟಿದ್ದೀರಿ. I will get that matter examined.

ಶ್ರೀ ಎಂ. ನಾರಾಯಣಸ್ವಾಮಿ : – ಮಾನ್ಯ ಅಧ್ಯಕ್ಷರೇ, ನಮಗೂ ಒಂದು ಅವಕಾಶ ಕೊಡಬೇಕು. ತಾವು ಅನೇಕ ಜನರಿಗೆ ಅವಕಾಶ ಕೊಡುತ್ತೀರಿ. ನಮಗೆ ಕೊಡುವುದಿಲ್ಲ ನಾವು ಪ್ರತಿಭಟನೆ ಮಾಡಬೇಕಾಗುತ್ತದೆ, ಧರಣಿ ಕುಳಿತುಕೊಳ್ಳಬೇಕಾಗುತ್ತದೆ. ಈ ದ್ವಂದ್ವ ನೀತಿ ಬೇಡ.

ಅಧ್ಯಕ್ಷರು : – ನಾನು ಹೇಳುತ್ತೇನೆ, ಮೂಲ ಪ್ರಶ್ನೆ ಕೇಳಿದವರು ರಾಮಸ್ವಾಮಿಯವರು. ಈ ಪ್ರಶ್ನೆಯ ಗಂಭೀರತೆಯನ್ನು ನಾನು ತಿಳಿದುಕೊಂಡು, ಹೆಚ್ಚಿನ ಜನರಿಗೆ ಅವಕಾಶ ಕೊಟ್ಟಿದ್ದೇನೆ. ನನ್ನ ಮೇಲೆ, ಆರೋಪ ಮಾಡತಕ್ಕಂಥಾದ್ದು ಸರಿಯಲ್ಲ.

ಶ್ರೀ ಎಂ. ನಾರಾಯಣಸ್ವಾಮಿ : – ಇದು ಗಹನವಾದ ವಿಚಾರ.

ಅಧ್ಯಕ್ಷರು : – ತಾವು ಬೇರೆ ರೂಪದಲ್ಲಿ ಇದೇ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ತಮಗೆ ಅಧಿಕಾರ ಇದೆ. ಅದನ್ನು ಬಿಟ್ಟು, ನನಗೆ ಅವಕಾಶ ಕೊಡುತ್ತಾ ಇಲ್ಲವೆಂದು ಹೇಳಬಾರದು. ಮೂಲ ಪ್ರಶ್ನೆಯ ಮೇಲೆ 2-3 ಉಪಪ್ರಶ್ನೆಗಳನ್ನು ಕೇಳುವ ಪದ್ಧತಿ ಇದೆ. ಆದರೆ, ವಿಷಯದ ಗಂಭೀರತೆಯನ್ನು ಅನುಸರಿಸಿ ನೋಡಿ, ಹೆಚ್ಚು ಅವಕಾಶ ಕೊಟ್ಟಿದ್ದೇನೆ. ಆದರೂ ಅವಕಾಶ ಕೊಡಲಿಲ್ಲವೆಂದು ಹೇಳುವುದು ಸರಿಯಲ್ಲ. ಮೂಲ ಪ್ರಶ್ನೆ ಕೇಳಿದವರಿಗೆ ಅವಕಾಶ ಮಾಡಿಕೊಟ್ಟಿದ್ದೇನೆ. ತಾವು ಬೇರೆ ರೂಪದಲ್ಲಿ ಪ್ರಶ್ನೆ ಕೇಳಿ; ಗಮನ ಸೆಳೆಯುವ ಸೂಚನೆ ಮೂಲಕ ಇಲ್ಲವೇ ನಿಯಮ 334ರ ಅಡಿಯಲ್ಲಿ ಕೇಳಿ, ತಮಗೆ ಆ ಅಧಿಕಾರ ಇದೆ.

ಶ್ರೀ ಎಂ. ನಾರಾಯಣಸ್ವಾಮಿ : – ನಾನು ಕೇಳುವ ಪ್ರಶ್ನೆಗಳು ಯಾವುವೂ ಬರುತ್ತಲೇ ಇಲ್ಲ.

ವಿಷಯ : – ಧಾರವಾಡದ ಕೆ.ಸಿ.ಸಿ. ಬ್ಯಾಂಕಿನ ಚುನಾವಣೆ ಕುರಿತು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 123(402)

ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ) : –

ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ)ಧಾರವಾಡ ಕೆ.ಸಿ.ಸಿ. ಬ್ಯಾಂಕನ್ನು ಯಾವ ದಿನಾಂಕದಂದು ಸೂಪರ್‌ಸೀಡ್ ಮಾಡಲಾಯಿತು?

ಆ) ಸೂಪರ್‌ಸೀಡ್ ಆದ ನಂತರ ಎಷ್ಟು ಅವಧಿಯ ಮೇಲೆ ಚುನಾವಣೆ ನಡೆಸಲು ಕಾನೂನಿನಲ್ಲಿ ಅವಕಾಶವಿದೆ?

ಇ)ಸದರಿ ಬ್ಯಾಂಕ್ ಸೂಪರ್-ಸೀಡ್ ಆಗಿ ಎರಡು ವರ್ಷಗಳಿಗೂ ಹೆಚ್ಚು ಅವಧಿಯಾಗಿದ್ದಾಗ್ಯೂ ಇದುವರೆವಿಗೂ ಆಡಳಿತ ಮಂಡಳಿಗೆ ಚುನಾವಣೆ ನಡೆಸದಿರಲು ಕಾರಣಗಳೇನು?